# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 185

ಸದಸ್ಯರ ಹೆಸರು ಶ್ರೀ ಪ್ರಾಣೇಶ್ ಎಂ.ಕೆ. (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

ಉತ್ತರಿಸುವವರು ಮಾನ್ಯ ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲ ಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು.

ಉತ್ತರಿಸಬೇಕಾದ ದಿನಾಂಕ 13-09-2022

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ 18 ವರ್ಷದೊಳಗಿನ ಹೆಚ್.ಐ.ವಿ. + ಪೀಡಿತ ಮಕ್ಕಳ ಹಾರೈಕೆಗೆ ವಿದ್ಯಾಭ್ಯಾಸ, ಪಾಲನೆ ಹಾಗೂ ಪೋಷಣೆಗಾಗಿ ಸರ್ಕಾರ ಕೈಗೊಂಡ ಕ್ರಮಗಳ ಕುರಿತು ಸಂಪೂರ್ಣ ವಿವರ ನೀಡುವುದು; | ಹೆಚ್.ಐ.ವಿ. + ಸೋಂಕಿತ/ಬಾಧಿತ ಮಕ್ಕಳ ಹಾಗೂ ಹೆಚ್.ಐ.ವಿ. + ನಿಂದ ಪಾಲಕರನ್ನು ಕಳೆದುಕೊಂಡ 18 ವರ್ಷದೊಳಗಿನ ಮಕ್ಕಳಿಗೆ ಪೌಷ್ಠಿಕ ಆಹಾರ, ಸೂಕ್ತ ವೈದ್ಯಕೀಯ ಚಿಕಿತ್ಸೆ ನೀಡುವುದರೊಂದಿಗೆ ಅವರನ್ನು ಶಿಕ್ಷಣದ ಮುಖ್ಯವಾಹಿನಿಯಲ್ಲಿ ತರಲು ವಿಶೇಷ ನೆರವು ನೀಡಲು ರಾಜ್ಯ ಸರ್ಕಾರದ ವತಿಯಿಂದ ವಿಶೇಷ ಪಾಲನಾ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.<br><br>ಯೋಜನೆಯಡಿಯಲ್ಲಿ ಆಂಟಿರೆಟ್ರೋವೈರಲ್ ಚಿಕಿತ್ಸಾ (ಎ.ಆರ್.ಟಿ) ಕೇಂದ್ರಗಳಲ್ಲಿ ನೋಂದಾಯಿತ ಕುಟುಂಬದ ವಿವರಗಳನ್ನು ಪಡೆದು, ಗೃಹ ಅಧ್ಯಯನ ನಡೆಸಿ, ಒಪ್ಪಿಗೆ ಪತ್ರ ಪಡೆದು ಹೆಚ್.ಐ.ವಿ. ಸೋಂಕಿತ/ಬಾದಿತ ಮಕ್ಕಳಿಗೆ ಆರ್ಥಿಕ ಸಹಾಯವನ್ನು ಪ್ರತಿ ಮಗುವಿಗೆ ಪ್ರತಿ ಮಾಹೆಗೆ ರೂ.1000/-ಗಳಂತೆ ಒದಗಿಸಲಾಗುತ್ತಿದೆ. ವೈದ್ಯಕೀಯ, ಪೌಷ್ಠಿಕ ಆಹಾರ, ಶಿಕ್ಷಣ ಮತ್ತು ಇತರೆ ಅವಶ್ಯಕತೆಗಳನ್ನು ಪೂರೈಸಲು ಕುಟುಂಬಗಳಿಗೆ ಪೂರಕವಾಗಿ ಆರ್ಥಿಕ ನೆರವನ್ನು ಮಗುವಿಗೆ 18 ವರ್ಷ ಪೂರ್ಣಗೊಳ್ಳುವವರೆಗೆ ಒದಗಿಸಲಾಗುತ್ತದೆ.<br><br>2021-22ನೇ ಸಾಲಿನಿಂದ ಸದರಿ ಯೋಜನೆ ವ್ಯಾಪ್ತಿಗೊಳಪಡುವ ಫಲಾನುಭವಿಗಳಿಗೆ ಅನುದಾನವನ್ನು ನೇರವಾಗಿ ಫಲಾನುಭವಿಗಳ ಖಾತೆಗೆ Direct Benefit Transfer (DBT) ಮುಖಾಂತರ ಜಮೆಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ. |

| | | |
|---|---|---|
| ಆ) | ರಾಜ್ಯದಲ್ಲಿ 18 ವರ್ಷದೊಳಗಿನ ಹೆಚ್.ಐ.ವಿ. + ಪೀಡಿತ ಮಕ್ಕಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ 18 ವರ್ಷದೊಳಗಿನ ಹೆಚ್.ಐ.ವಿ. + ಪೀಡಿತ ಮಕ್ಕಳ ಸಂಖ್ಯೆ 3102 ಮತ್ತು ಬಾಧಿತ ಮಕ್ಕಳ ಸಂಖ್ಯೆ 9488 ಇದ್ದು, ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ಒದಗಿಸಿದೆ. |
| ಇ) | ಈ ತರದ ಪ್ರಕರಣದಡಿಯಲ್ಲಿ ಪಾಲನೆ ಮತ್ತು ಪೋಷಣೆಗಾಗಿ ವೈದ್ಯಕೀಯ ಚಿಕಿತ್ಸೆಗಾಗಿ ಖಾಸಗಿ ಸಂಸ್ಥೆಗಳಿಗೆ ನೀಡಿರುವ ಅನುದಾನವೆಷ್ಟು; ವೆಚ್ಚಗಳವಾರು, ಜಿಲ್ಲಾವಾರು ಮಾಹಿತಿ ನೀಡುವುದು; (ಸಂಸ್ಥೆಗಳ ವಿವರ ನೀಡುವುದು) | ಹೆಚ್.ಐ.ವಿ. ಸೋಂಕಿತ/ಬಾಧಿತ ಮಕ್ಕಳ ಪಾಲನೆ ಮತ್ತು ಪೋಷಣೆಗಾಗಿ, ವೈದ್ಯಕೀಯ ಚಿಕಿತ್ಸೆಗಾಗಿ ಖಾಸಗಿ ಸಂಸ್ಥೆಗಳಿಗೆ ಯಾವುದೇ ಅನುದಾನವನ್ನು ಸರ್ಕಾರದಿಂದ ಬಿಡುಗಡೆ ಮಾಡಲಾಗುತ್ತಿಲ್ಲ. |
| ಈ) | ಇಂತಹ ಪ್ರಕರಣಗಳನ್ನು ನಿರ್ವಹಣೆ ಮಾಡಲು ಸರ್ಕಾರ ವರ್ಷಕ್ಕೆ ಎಷ್ಟು ಅನುದಾನವನ್ನು ಮೀಸಲಿಡುತ್ತಿದೆ? (ಕಳೆದ 5 ವರ್ಷದ ವಿವರ ನೀಡುವುದು) | ಕಳೆದ 5 ವರ್ಷಗಳಲ್ಲಿ ವಿಶೇಷ ಪಾಲನಾ ಯೋಜನೆಗೆ ಸರ್ಕಾರದಿಂದ ಮಂಜೂರು ಮಾಡಲಾಗಿರುವ ಅನುದಾನ ವಿವರಗಳನ್ನು ಅನುಬಂಧ -2 ರಲ್ಲಿ ಒದಗಿಸಿದೆ. |

ಸಂಖ್ಯೆ: ಮಮಇ 102 ಮಭಾಬ 2022

Halappa SA

(ಆಚಾರ್ ಹಾಲಪ್ಪ ಬಸಪ್ಪ)
ಗಣಿ ಮತ್ತು ಭೂ ವಿಜ್ಞಾನ, ಮಹಿಳಾ ಮತ್ತುಮಕ್ಕಳ
ಅಭಿವೃದ್ಧಿ ಹಾಗೂ ವಿಕಲಚೇತನರ ಹಾಗೂ
ಹಿರಿಯ ನಾಗರಿಕರ ಸಬಲೀಕರಣ ಸಚಿವರು.

ವಿಧಾನ ಪರಿಷತ್ತಿನ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:185ಕ್ಕೆ

ಅನುಬಂಧ-1

**2022-23ನೇ ಸಾಲಿನ ವಿಶೇಷ ಪಾಲನಾ ಯೋಜನೆಯ ಸೋಂಕಿತ ಮತ್ತು ಬಾಧಿತ ಮಕ್ಕಳ ವರ್ಗಾವಾರು ವಿವರ**

| ಕ್ರ.ಸಂ. | ಜಿಲ್ಲೆ | 2022-23ನೇ ಸಾಲಿನ ವಿಶೇಷ ಪಾಲನಾ ಯೋಜನೆಗೆ ಒಳಪಟ್ಟ ಮಕ್ಕಳ ಸಂಖ್ಯೆ | | | ಒಟ್ಟು ಸೋಂಕಿತ ಮಕ್ಕಳ ಸಂಖ್ಯೆ | | | ಒಟ್ಟು ಭಾದಿತ ಮಕ್ಕಳ ಸಂಖ್ಯೆ | | |
|---|---|---|---|---|---|---|---|---|---|---|
| | | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು | ಗಂಡು | ಹೆಣ್ಣು | ಒಟ್ಟು |
| 1 | ಬಾಗಲಕೋಟೆ | 346 | 332 | **678** | 138 | 125 | **263** | 208 | 207 | **415** |
| 2 | ಬೆಂಗಳೂರು ನಗರ | 99 | 125 | **224** | 22 | 19 | **41** | 77 | 106 | **183** |
| 3 | ಬೆಂ.ಗ್ರಾಮಾಂತರ | 78 | 87 | **165** | 11 | 14 | **25** | 67 | 73 | **140** |
| 4 | ಬೆಳಗಾಂ | 478 | 408 | **886** | 152 | 115 | **267** | 326 | 293 | **619** |
| 5 | ಬಳ್ಳಾರಿ | 426 | 377 | **803** | 158 | 122 | **280** | 268 | 255 | **523** |
| 6 | ಬೀದರ | 208 | 188 | **396** | 42 | 57 | **99** | 166 | 131 | **297** |
| 7 | ಬಿಜಾಪುರ | 251 | 203 | **454** | 149 | 128 | **277** | 102 | 75 | **177** |
| 8 | ಚಾಮರಾಜನಗರ | 134 | 154 | **288** | 24 | 23 | **47** | 110 | 131 | **241** |
| 9 | ಚಿಕ್ಕಬಳ್ಳಾಪುರ | 129 | 118 | **247** | 21 | 16 | **37** | 108 | 102 | **210** |
| 10 | ಚಿಕ್ಕಮಗಳೂರು | 163 | 135 | **298** | 25 | 24 | **49** | 138 | 111 | **249** |
| 11 | ಚಿತ್ರದುರ್ಗ | 182 | 188 | **370** | 36 | 33 | **69** | 146 | 155 | **301** |
| 12 | ದಕ್ಷಿಣ ಕನ್ನಡ | 215 | 210 | **425** | 56 | 51 | **107** | 159 | 159 | **318** |
| 13 | ದಾವಣಗೆರೆ | 174 | 195 | **369** | 41 | 28 | **69** | 133 | 167 | **300** |
| 14 | ಧಾರವಾಡ | 229 | 213 | **442** | 63 | 45 | **108** | 166 | 168 | **334** |
| 15 | ಗದಗ | 171 | 154 | **325** | 49 | 65 | **114** | 122 | 89 | **211** |
| 16 | ಕಲಬುರಗಿ | 151 | 118 | **269** | 66 | 49 | **115** | 85 | 69 | **154** |
| 17 | ಹಾಸನ | 172 | 160 | **332** | 26 | 30 | **56** | 146 | 130 | **276** |
| 18 | ಹಾವೇರಿ | 364 | 337 | **701** | 80 | 69 | **149** | 284 | 268 | **552** |
| 19 | ಕೊಡಗು | 68 | 83 | **151** | 13 | 11 | **24** | 55 | 72 | **127** |
| 20 | ಕೋಲಾರ | 184 | 221 | **405** | 20 | 23 | **43** | 164 | 198 | **362** |
| 21 | ಕೊಪ್ಪಳ | 534 | 440 | **974** | 160 | 115 | **275** | 374 | 325 | **699** |
| 22 | ಮೈಸೂರು | 348 | 359 | **707** | 68 | 48 | **116** | 280 | 311 | **591** |
| 23 | ಮಂಡ್ಯ | 141 | 191 | **332** | 23 | 15 | **38** | 118 | 176 | **294** |
| 24 | ರಾಯಚೂರು | 290 | 239 | **529** | 61 | 48 | **109** | 229 | 191 | **420** |
| 25 | ರಾಮನಗರ | 142 | 142 | **284** | 13 | 20 | **33** | 129 | 122 | **251** |
| 26 | ಶಿವಮೊಗ್ಗ | 197 | 203 | **400** | 32 | 35 | **67** | 165 | 168 | **333** |
| 27 | ತುಮಕೂರು | 134 | 145 | **279** | 34 | 37 | **71** | 100 | 108 | **208** |
| 28 | ಉಡುಪಿ | 179 | 166 | **345** | 34 | 25 | **59** | 145 | 141 | **286** |
| 29 | ಉತ್ತರಕನ್ನಡ | 94 | 100 | **194** | 9 | 13 | **22** | 85 | 87 | **172** |
| 30 | ಯಾದಗಿರಿ | 165 | 153 | **318** | 38 | 35 | 73 | 127 | 118 | **245** |
| ಒಟ್ಟು | | **6446** | **6144** | **12590** | **1664** | **1438** | **3102** | **4782** | **4706** | **9488** |

ವಿಧಾನ ಪರಿಷತ್ತಿನ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ:185ಕ್ಕೆ ಅನುಬಂಧ-2

**ಕಳೆದ 5 ವರ್ಷಗಳಲ್ಲಿ ವಿಶೇಷ ಪಾಲನಾ ಯೋಜನೆಗೆ ಸರ್ಕಾರದಿಂದ ಮಂಜೂರು ಮಾಡಲಾಗಿರುವ ಅನುದಾನದ ವಿವರ**

| ಕ್ರ.ಸಂ. | ಆರ್ಥಿಕ ವರ್ಷ | ಮಂಜೂರು ಮಾಡಿರುವ ಅನುದಾನ (ರೂ.ಕೋಟಿಗಳಲ್ಲಿ) |
|---|---|---|
| 1 | 2017-18 | 15.00 ಕೋಟಿಗಳು |
| 2 | 2018-19 | 15.00 ಕೋಟಿಗಳು |
| 3 | 2019-20 | 15.00 ಕೋಟಿಗಳು |
| 4 | 2020-21 | 15.00 ಕೋಟಿಗಳು |
| 5 | 2021-22 | 20.00 ಕೋಟಿಗಳು |